ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಅಂತರರಾಷ್ಟ್ರೀಯ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE : 03/10/2019

# ಪಾಕ್‌ಗೆ ಸಿಗದ ನಿಜಾಮರ ನಿಧಿ

ಉದಯವಾಣಿ 3/10/19

**ಲಂಡನ್:** ಭಾರತ-ಪಾಕ್ ದೇಶ ವಿಭಜನೆಯ ಸಂದರ್ಭದಲ್ಲಿ 'ಪಾಕಿಸ್ತಾನ ಪ್ರೇಮಿ' ಹೈದರಾಬಾದ್ ನಿಜಾಮ ಮಾಡಿದ್ದ ಹಣಕಾಸಿನ ಮೋಸಕ್ಕೆ ಈಗ ತಾರ್ಕಿಕ ಅಂತ್ಯ ಸಿಕ್ಕಿದೆ. 1947ರಲ್ಲಿ ಶುರುವಾಗಿದ್ದ ಈ ವಿವಾದ ಬರೋಬ್ಬರಿ 70 ವರ್ಷಗಳ ನಂತರ ಬಗೆಹರಿದಿದ್ದು ಭಾರತಕ್ಕೆ ಜಯ ಸಿಕ್ಕಿದೆ.



ಪಾಕ್ ಸೇರುವ ತನ್ನ ಯತ್ನ ಫಲಿಸಲ್ಲ ಎಂಬುದನ್ನು ಅರಿತಿದ್ದ ಹೈದರಾಬಾದ್‌ನ ನಿಜಾಮ ಉಸ್ಮಾನ್ ಅಲಿ ಖಾನ್, ಲಂಡನ್‌ನಲ್ಲಿನ ಪಾಕಿಸ್ತಾನ ರಾಯಭಾರ ಕಚೇರಿ ಅಧಿಕಾರಿಗೆ ಕಳುಹಿಸಿದ್ದ 10 ಲಕ್ಷ ಪೌಂಡ್(306 ಕೋಟಿ ರೂ.) ಭಾರತಕ್ಕೇ ಸೇರಿದ್ದು ಎಂದು ಲಂಡನ್‌ನ ಇಂಗ್ಲೆಂಡ್ ಮತ್ತು ವೇಲ್ಸ್ ಹೈಕೋರ್ಟ್ ತೀರ್ಪು ನೀಡಿದೆ. ಈ ಮೂಲಕ ಭಾರತದ ಹಣಕ್ಕಾಗಿ ಜಗಳವಾಡುತ್ತಿದ್ದ ಪಾಕಿಸ್ತಾನಕ್ಕೂ ಇಲ್ಲೂ ಮುಖಭಂಗವಾಗಿದೆ.

1947ರಲ್ಲಿನ ದೇಶ ವಿಭಜನೆ ಸಂದರ್ಭದಲ್ಲಿ ಹೈದರಾಬಾದ್ ನಿಜಾಮ ಉಸ್ಮಾನ್ ಅಲಿ ಖಾನ್, ಭಾರತದಲ್ಲೇ ಉಳಿಯುವುದೋ ಅಥವಾ ಪಾಕಿಸ್ತಾನಕ್ಕೆ ಸೇರುವುದೋ ಎಂಬ ಗೊಂದಲದಲ್ಲಿದ್ದರು. ಆಗ, ಅನಿವಾರ್ಯವಾಗಿ ಭಾರತಕ್ಕೆ ಸೇರಲು ನಿಜಾಮರು ಒಪ್ಪಿಗೆ ನೀಡಿದ್ದರು. ▶ 7ನೇ ಪುಟಕ್ಕೆ

# ಪಾಕ್‌ಗೆ ಸಿಗದ ನಿಜಾಮರ ನಿಧಿ

ಉದಯವಾಣಿ 3/10/19

**1ನೇ ಪುಟದಿಂದ ▶** ಈ ಸಂದರ್ಭದಲ್ಲೇ ಅವರು ಲಂಡನ್‌ನಲ್ಲಿರುವ ಹೊಸದಾಗಿ ಸೃಷ್ಟಿಯಾಗಿದ್ದ ಪಾಕಿಸ್ತಾನದ ರಾಯಭಾರ ಕಚೇರಿಯ ಅಧಿಕಾರಿ ಹಬೀಬ್ ಇಬ್ರಾಹಿಂ ರಹಿಮತುಲ್ಲಾಗೆ 10 ಲಕ್ಷ ಪೌಂಡ್ ಅನ್ನು ನೀಡಿದ್ದರು. ಅವರು ನಿಜಾಮರ ಪರವಾಗಿ ಲಂಡನ್ ಬ್ಯಾಂಕ್‌ನಲ್ಲಿ ಖಾತೆ ತೆರೆದು ಇಟ್ಟಿದ್ದರು. ಈ ಖಾತೆಯನ್ನು ನ್ಯಾಟ್‌ವೆಸ್ಟ್ ಬ್ಯಾಂಕ್ ನಿರ್ವಹಿಸುತ್ತಿತ್ತು.

**ಸೋತ ಪಾಕಿಸ್ತಾನ:** ಇಂದಿನ ಹಣದ ಮೌಲ್ಯದ ಪ್ರಕಾರ, 10 ಲಕ್ಷ ಪೌಂಡ್‌ನ ಮೌಲ್ಯ 306 ಕೋಟಿ ರೂ.ಗಳಾಗಿದೆ. ಈ ಹಣಕ್ಕಾಗಿ ವಿವಿಧ ರೀತಿಯಲ್ಲಿ ವಾದ ಮಾಡಿದ್ದ ಪಾಕಿಸ್ತಾನ, ಒಮ್ಮೆ ಇದು ಶಸ್ತ್ರಾಸ್ತ್ರ ಖರೀದಿಗಾಗಿ ನಿಜಾಮರು ಪಾಕಿಸ್ತಾನ ಸರ್ಕಾರಕ್ಕೆ ನೀಡಬೇಕಿದ್ದ ಹಣವಾಗಿತ್ತು ಎಂದು ವಾದಿಸಿತ್ತು. ನಂತರ ಇದು ಭಾರತದ ವಿರುದ್ಧ ತನ್ನನ್ನು ರಕ್ಷಿಸಿಕೊಳ್ಳಲು ಇಟ್ಟ ಹಣವಾಗಿತ್ತು. ಹೈದರಾಬಾದ್ ಅನ್ನು ಭಾರತವು ಅಕ್ರಮವಾಗಿ ವಶಪಡಿಸಿಕೊಂಡಿತು ಎಂದೆಲ್ಲ ವಾದಿಸಿತು. ಆದರೆ ಹೈದರಾಬಾದ್ ನಿಜಾಮರ ಹಣಕ್ಕೆ ಪಾಕಿಸ್ತಾನ ಬೇಡಿಕೆ ಇಡುತ್ತಿರುವುದು ನ್ಯಾಯೋಚಿತವಲ್ಲ ಎಂದು ಕೋರ್ಟ್ ಸಂಪೂರ್ಣವಾಗಿ ತಿರಸ್ಕರಿಸಿತು. ಅಷ್ಟೇ ಅಲ್ಲ, ಹೈದರಾಬಾದ್ ಅನ್ನು ಅಕ್ರಮವಾಗಿ ಭಾರತ ವಶಪಡಿಸಿಕೊಂಡಿದೆಯೋ ಅಥವಾ ಇಲ್ಲವೇ ಎಂಬುದು ಈ ಪ್ರಕರಣದ ವ್ಯಾಪ್ತಿಗೆ ಒಳಪಡುವುದಿಲ್ಲ ಎಂದೂ ಅದು ಹೇಳಿತು.

## ಉತ್ತರಾಧಿಕಾರಿಗೆ ಹಣ

ನಿಜಾಮರ ಹಣವು ಅವರ 7ನೇ ನಿಜಾಮರ ವಂಶಸ್ಥರಿಗೆ ಸಲ್ಲಬೇಕಿದೆ ಎಂದು ಲಂಡನ್‌ನ ರಾಯಲ್ ಕೋರ್ಟ್‌ನ ನ್ಯಾ. ಮಾರ್ಕಸ್ ಸ್ಮಿತ್ ಸ್ಪಷ್ಟವಾಗಿ ತೀರ್ಪು ನೀಡಿದ್ದಾರೆ. ಕಳೆದ ಹಲವು ವರ್ಷಗಳಿಂದಲೂ ಈ ಪ್ರಕರಣ ನಡೆಯುತ್ತಿತ್ತಾದರೂ, 1950ರ ವೇಳೆಗೆ ವಿಚಾರಣೆ ಸ್ಥಗಿತಗೊಂಡಿತ್ತು. ಆದರೆ ನಂತರ, 2013ರಿಂದ ತ್ವರಿತಗತಿ ಪಡೆದುಕೊಂಡಿತ್ತು.

ಈ ಹಣವನ್ನು ನಿಜಾಮರು ಬ್ಯಾಂಕ್‌ನಲ್ಲಿ ಇಡುವ ಹೊತ್ತಿಗೆ ಅಪ್ರಾಪ್ತ ವಯಸ್ಸಿನವರಾಗಿದ್ದ ಮುಕರ್ರಮ್ ಝಾ ಹಾಗೂ ನಿಜಾಮರ ಕುಟುಂಬದ ಇತರ ಸದಸ್ಯರು ಭಾರತದ ಸರ್ಕಾರಕ್ಕೆ ಈ ಪ್ರಕರಣದಲ್ಲಿ ನೆರವಾಗಿದ್ದಾರೆ.

4